# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ. ನಂ.112/2023**

ಪ್ರ.ವ.ಬೋ. ದಿನಾಂಕ – 12.08.2026

| | | | |
|---|---|---|---|
| ಸಾಕ್ಷಿದಾರರ ಹೆಸರು | – ಜಯರಾಮಪ್ಪ | ಫ್ರಾ.ಸಾ. | – 03 |
| ತಂದೆಯ ಹೆಸರು | – ತಿಮ್ಮಣ್ಣ | ಚಾ.ಸಾ. | – 07 |
| ವಯಸ್ಸು | – 50 ವರ್ಷ | | |
| ಉದ್ಯೋಗ | – ವ್ಯವಸಾಯ | | |
| ವಾಸ ಸ್ಥಳ | – ಗೋಸಿಕೆರೆ ಗ್ರಾಮ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಚಾಸಾ:1 ನನಗೆ ಸೊಸೆ ಆಗಬೇಕು. ಚಾಸಾ:6, 8 ರಿಂದ 11 ಗೊತ್ತು. ಆರೋಪಿಗಳು ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಚಾಸಾ:1 ಮತ್ತು ಆರೋಪಿಗಳ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು.)

**– ಪಾಟೀ ಸವಾಲು – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ದಿಃ 18.11.2022 ರಂದು ಸಂಜೆ 6.00 ಗಂಟೆಗೆ ನಾನು ಮತ್ತು ಚಾಸಾ:6, 8 ಜಮೀನು ಕೆಲಸ ಮುಗಿಸಿ ವಾಪಸ್ ಮನೆಗೆ ಬಂದಾಗ, ಚಾಸಾ:1ರವರು ಅದೇ ದಿನ 4.00 ಗಂಟೆಗೆ ಮನೆಯ ಅಂಗಳದ ಕಸವನ್ನು ಹೊಡೆಯುತ್ತಿರುವಾಗ ಅಂಗಳದಲ್ಲಿನ ಪೇಪರ್ ಗಾಳಿಗೆ ನಮ್ಮ ಪಕ್ಕದ ಮನೆಯವರಾದ 1 ನೇ

ಆರೋಪಿಯ ಅಂಗಳಕ್ಕೆ ಹೋಗಿದ್ದು, ಆಗ 1 ನೇ ಆರೋಪಿಯು "ಕಸವನ್ನು ನಮ್ಮ ಅಂಗಳಕ್ಕೆ ಯಾಕೆ ಹೊಡೆಯುತ್ತೀಯಾ" ಎಂದು ಹೇಳಿದ್ದು, ಈ ವಿಚಾರವಾಗಿ ನಾನು ಮತ್ತು ಚಾಸಾ:1, 6, 8, 9 ಸೇರಿಕೊಂಡು ರಾತ್ರಿ 8.30 ಗಂಟೆಗೆ 1 ನೇ ಆರೋಪಿಯ ಮನೆಯ ಹತ್ತಿರ ಹೋಗಿ ಗಲಾಟೆಯ ಬಗ್ಗೆ ವಿಚಾರ ಮಾಡಲು ಹೋದಾಗ ಆರೋಪಿಗಳು ಅಕ್ರಮ ಗುಂಪು ಕಟ್ಟಿಕೊಂಡು ಬಂದು 1 ನೇ ಆರೋಪಿ ತನ್ನ ಕೈಯಲ್ಲಿದ್ದ ಚಪ್ಪಲಿಯನ್ನು ತೆಗೆದುಕೊಂಡು ಚಾಸಾ:1 ರವರನ್ನು ಹಿಡಿದು ಎಳೆದಾಡಿ, ಬಟ್ಟೆಯನ್ನು ಹಿಡಿದು ಎಳೆದಾಡಿ, ಚಪ್ಪಲಿಯಿಂದ ಬೆನ್ನಿಗೆ ತಲೆಗೆ ಹೊಡೆದಿದ್ದು, 3 ನೇ ಆರೋಪಿ ಕಟ್ಟಿಗೆಯಿಂದ ನನ್ನನ್ನು ಸಾಯಿಸುವ ಉದ್ದೇಶದಿಂದ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದು, 5 ನೇ ಆರೋಪಿ ತನ್ನ ಕೈಲ್ಲಿದ್ದ ದೊಣ್ಣೆಯಿಂದ ಚಾಸಾ:8 ರವರ ಎಡಗಾಲಿಗೆ ಬಲವಾಗಿ ಹೊಡೆದು ರಕ್ತಗಾಯಪಡಿಸಿದ್ದು, 4 ನೇ ಆರೋಪಿ ಚಾಸಾ:6 ರವರ ಹೆಂಡತಿಗೆ ಬೈದಾಡಿ, ನೂಕಾಡಿದ್ದು, 2 ನೇ ಆರೋಪಿ ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಚಾಸಾ:6 ರವರ ಬಲಗಣ್ಣಿಗೆ ಹೊಡೆದು ರಕ್ತಗಾಯಪಡಿಸಿದ್ದು, ಅಲ್ಲಿಯೇ ಇದ್ದ ಚಾಸಾ:10, 11 ಗಲಾಟೆ ಬಿಡಿಸಿದ್ದು, ಆರೋಪಿಗಳು ಹೋಗುವಾಗ ಕೊಲೆ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ:5 ಎಂದು ಗುರುತಿಸಲಾಯಿತು. ನಿಪಿ:5 ರಂತೆ ಹೇಳಿಕೆ ನೀಡಿದ್ದರೂ, ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿಯ ಪರವಾಗಿ ಶ್ರೀ ಎಂ.ಟಿ.ಎಸ್. ವಕೀಲರಿಂದ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.